ಅಸಲು ದಾವೆ ಸಂಃ 240/2018
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 08-08-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ

3. ಇಮಾಂ ಬೇಗ್ ನನ್ನ ಅಜ್ಜನಿಗೆ ದಾವಾ ಆಸ್ತಿಯಲ್ಲಿರುವ ಮನೆಯನ್ನು ಹೊರತುಪಡಿಸಿ ಬೇರೆ ಮನೆ ಇರಲಿಲ್ಲ ಎಂದರೆ ಸರಿ. ಇಮಾಂ ಬೇಗ್ ಹಾಗೂ ಅವರ ಮೂರು ಜನ ಮಕ್ಕಳು ಒಟ್ಟಿಗೆ ಇದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಸ್ಥಳದಲ್ಲಿ ಈಗ 4 ಮನೆಗಳು ಇವೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣ ಭಾಗಕ್ಕೆ ಎರಡು ಆರ್ ಸಿ ಸಿ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳಲ್ಲಿ 4 ಹಾಗೂ 5 ನೇ ಪ್ರತಿವಾದಿ ವಾಸಿಸುತ್ತಿದ್ದಾರೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ವಾಸ ಮಾಡುತ್ತಿರುವ ಮನೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಮನೆಗಳು ಅವರಿಗೆ ಇರುವುದಿಲ್ಲ ಎಂದರೆ ಸರಿ. ಈ ಎರಡು ಆರ್ ಸಿ ಸಿ ಮನೆಗಳು ಕಟ್ಟುವ ಪೂರ್ವದಲ್ಲಿ ಕಪ್ಪು ಹೆಂಚಿನ ಮನೆಗಳು ಇದ್ದವು ಎಂದರೆ ಸರಿ. ಕಪ್ಪು ಹೆಂಚಿನ ಮನೆಯಲ್ಲಿ 4 ಮತ್ತು 5 ನೇ ಪ್ರತಿವಾದಿಗಳ ತಂದೆ ಷೇರು ಬೇಗ್ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನನ್ನ ತಂದೆ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಷೇರು ಬೇಗ್ ರವರಿಗೆ ಕಪ್ಪು ಹೆಂಚಿನ ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ಮನೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಮನೆಯಲ್ಲಿ ಷೇರು ಬೇಗ್ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸುಮಾರು 35 ವರುಷಗಳಿಂದ ಷೇರು ಬೇಗ್ ನಮ್ಮ ತಂದೆ ಜೊತೆ ವಾಸ ಮಾಡುತ್ತಿದ್ದರು. ಷೇರು ಬೇಗ್ ರವರ ಮರಣದ ನಂತರ ಅವರ ಮಕ್ಕಳಾದ 4 ಮತ್ತು 5 ನೇ ಪ್ರತಿವಾದಿಗಳು ಸದರಿ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

4. ದಾವಾ ಆಸ್ತಿಯಲ್ಲಿದ್ದ ಕಪ್ಪು ಹೆಂಚಿನ ಮನೆ ಹಾಗೂ ಅದರ ಉತ್ತರ ಭಾಗಕ್ಕಿದ್ದ ಖಾಲಿ ಜಾಗವನ್ನು ಷೇರು ಬೇಗ್ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗದ ಉತ್ತರ ಭಾಗಕ್ಕೆ ನಾವು ಮೂವರು ಹೆಣ್ಣು ಮಕ್ಕಳು ವಾಸಮಾಡುತ್ತಿದ್ದೇವೆ ಎಂದರೆ ಸರಿ. ಮೂರನೇ ಪ್ರತಿವಾದಿ ನಮ್ಮ ಮನೆಗಳ ಸಾಲಿನಲ್ಲಿ ವಾಸಮಾಡುತ್ತಿದ್ದಾರೆ ಎಂದರೆ

ಸರಿ. ಸದರಿ ಮನೆಯೂ ಸಹ ದಾವಾ ಆಸ್ತಿಗೆ ಸೇರಿದ್ದು ಎಂದರೆ ಸರಿ. ನಾವು ಮೂರು ಜನ ಹೆಣ್ಣು ಮಕ್ಕಳು ಈಗ್ಗೆ 6 ವರುಷಗಳಿಂದ ಬೇರೆ ಬೇರೆ ವಾಸ ಮಾಡುತ್ತಿದ್ದೇವೆ ಎಂದರೆ ಸರಿ.

5. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 24 x 90 ಅಡಿ ಎಂದರೆ ಸರಿ. ಸದರಿ ಆಸ್ತಿಯ ಪಶ್ಚಿಮ ಭಾಗಕ್ಕೆ ಮುನಿಸಿಪಾಲಿಟಿ ಜಾಗ ಇದೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ಕಟ್ಟಿರುವ ಮನೆಗಳ ವಿಸ್ತೀರ್ಣ ಪೂರ್ವ ಪಶ್ಚಿಮವಾಗಿ 24 ಅಡಿ , ಹಾಗೂ ಉತ್ತರ ದಕ್ಷಿಣವಾಗಿ 45 ಅಡಿಗಳು ಎಂದರೆ ಸರಿ. ಸದರಿ ಮನೆಗಳ ಉತ್ತರ ದಿಕ್ಕಿಗೆ 15 x 24 ಅಡಿ ಖಾಲಿ ಜಾಗ ಇದೆ ಎಂದರೆ ಸರಿ. ಸದರಿ ಖಾಲಿ ಜಾಗದ ಉತ್ತರ ಭಾಗಕ್ಕೆ ನಾವು ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ನಾವು ವಾಸ ಮಾಡುತ್ತಿರುವ ಮನೆಗಳು ಪೂರ್ವ ಪಶ್ಚಿಮವಾಗಿ 24 ಅಡಿ ಹಾಗೂ ಉತ್ತರ ದಕ್ಷಿಣವಾಗಿ 30 ಅಡಿ ಇದೆ ಎಂದರೆ ಸರಿ.

6. ನನ್ನ ತಂದೆಯ ಜೀವಿತಾವಧಿಯಲ್ಲಿ ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ದಕ್ಷಿಣ ಭಾಗದ 24 x 60 ಅಡಿ ಆಸ್ತಿಯನ್ನು 4 ಮತ್ತು 5 ನೇ ಪ್ರತಿವಾದಿಯ ತಂದೆ ಷೇರು ಬೇಗ್ ರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

7. 2000 ಸಾಲಿನಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ. 1989 ರ ನಂತರ ಭದ್ರಾವತಿ ತಾಲ್ಲೂಕಿನ ಸನ್ಯಾಸಿ ಕೋಡಮಗಿ ಗ್ರಾಮದಲ್ಲಿ ನನ್ನ ತಂದೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸನ್ಯಾಸಿ ಕೋಡಮಗಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚನ್ನಗಿರಿಯ ನಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. 1989 ನೇ ಸಾಲಿನಲ್ಲಿ ನನ್ನ ತಂದೆ ಷೇರು ಬೇಗ್ ರವರಿಗೆ ದಾವಾ ಸ್ವತ್ತಿನಲ್ಲಿನ ದಕ್ಷಿಣ ಭಾಗದ 24 x 60 ಅಡಿ ಆಸ್ತಿಯನ್ನು ಬಿಟ್ಟು ಕೊಟ್ಟು ಅದರ ಹಣವನ್ನು ಪಡೆದು ಭದ್ರಾವತಿ ತಾಲ್ಲೂಕಿನ ಸನ್ಯಾಸಿ ಕೋಡಮಗಿ ಗ್ರಾಮಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ.

8. 1989 ನೇ ಸಾಲಿನಲ್ಲಿ ಪಾಲು ವಿಭಾಗದ ನಂತರ ನನ್ನ ಮತ್ತೊಬ್ಬ ಚಿಕ್ಕಪ್ಪ ಶಬ್ಬೀರ್ ಬೇಗ್ ರವರು ಬೇರೆಡೆ ನೆಲೆಸಿರುತ್ತಾರೆ ಎಂದರೆ ಸರಿ. ಹಾಗಾಗಿ 4 ಮತ್ತು 5 ನೇ ಪ್ರತಿವಾದಿಗಳ ತಂದೆಗೆ ಮತ್ತು ನನ್ನ ತಂದೆಗೆ ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. 1989 ನೇ ಸಾಲಿನ ನಂತರ 4 ಮತ್ತು 5 ನೇ ಪ್ರತಿವಾದಿಯ ತಂದೆ ಷೇರು ಬೇಗ್ ರವರಿಗೆ ಮನೆಯನ್ನು ಬಿಟ್ಟುಕೊಡುವಂತೆ ಕೇಳಿದ್ದೆವು ಎಂದರೆ ಸರಿ. ಸುಮಾರು 35 ವರುಷಗಳ ಪೂರ್ವದಲ್ಲಿ ನನ್ನ ತಂದೆ ಷೆರು ಬೇಗ್ ರವರಿಗೆ ಮನೆ

ಬಿಟ್ಟುಕೊಡುವಂತೆ ಕೇಳಿದಾಗ ಸದರಿಯವರು ಮನೆ ಬಿಟ್ಟು ಕೊಟ್ಟಿರುತ್ತಾರೆ. ಷೇರು ಬೇಗ್ ರವರು ದಾವಾ ಸ್ವತ್ತಿನ ದಕ್ಷಿಣ ಭಾಗದಲ್ಲಿದ್ದ ಕಪ್ಪು ಹೆಂಚಿನ ಮನೆಯಲ್ಲಿ 26 ವರುಷಗಳ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರ ಮರಣದ ನಂತರ 4 ಮತ್ತು 5 ನೇ ಪ್ರತಿವಾದಿ ಅದೇ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಹಾಗಾಗಿ 15 x 24 ಅಡಿ ಖಾಲಿ ಜಾಗವನ್ನು ಷೇರು ಬೇಗ್ ರವರ ಮರಣದ ನಂತರ ಅವರ ಮಕ್ಕಳು 4 ಮತ್ತು 5 ನೇ ಪ್ರತಿವಾದಿಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಷೇರು ಬೇಗ್ ರವರ ಮರಣದ ನಂತರ 4 ಮತ್ತು 5 ನೇ ಪ್ರತಿವಾದಿಗಳಿಗೆ ಮನೆ ಹಾಗೂ ಖಾಲಿ ಜಾಗವನ್ನು ಬಿಟ್ಟು ಕೊಡುವಂತೆ ಕೇಳಿರುತ್ತೇನೆ. ಷೇರು ಬೇಗ್ ರವರ ಮರಣದ 1 ವರುಷದ ನಂತರ ಮನೆ ಹಾಗೂ ಖಾಲಿ ಜಾಗವನ್ನು ಬಿಟ್ಟು ಕೊಡುವಂತೆ ಕೇಳಿದಾಗ 4 ಮತ್ತು 5 ನೇ ಪ್ರತಿವಾದಿ ಸದರಿ ಸ್ಥಳವು ನಮ್ಮದೇ ಎಂದು ಉತ್ತರಿಸಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು**)**

ಓ**.**ಹೇ**.**ಕೇ**.** ಸರಿ ಇದೆ**.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.